**C.C. 55/2018**
**PW-1**

ದಿಃ **08.05.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಪಿ.ಆರ್.ಆರ್. ವಕೀಲರಿಂದ**

ಪಿರ್ಯಾದನ್ನು ದಾಖಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು ಎಲೆಕ್ಟ್ರಿಕಲ್ ಮತ್ತು ವ್ಯವಸಾಯ ಕೆಲಸ ಮಾಡುತ್ತೇನೆ. ನೀವು ಎಲೆಕ್ಟ್ರಿಕಲ್ ಮತ್ತು ವ್ಯವಸಾಯ ಕೆಲಸ ಮಾಡುತ್ತಿರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮಗೆ ಎಷ್ಟು ಎಕರೆ ಜಮೀನು ಇದೆ ಎಂದರೆ ಸಾಕ್ಷಿ ಎರಡೂವರೆ ಎಕರೆ ಸ.ನಂ.1216 ಹಾಗೂ 1217 ರಲ್ಲಿ ಇದ್ದು, ಸದರಿ ಜಮೀನು ರತ್ನಪುರಿಯಲ್ಲಿದೆ.

ವಾರ್ಷಿಕವಾಗಿ ನೀವು ಎಷ್ಟು ಸಂಪಾದನೆ ಮಾಡುತ್ತೀರಾ ಎಂದರೆ ಸಾಕ್ಷಿ 1 ಲಕ್ಷದಷ್ಟು ಎಂದು ಹೇಳುತ್ತಾರೆ. ವಾರ್ಷಿಕವಾಗಿ 1 ಲಕ್ಷ ಸಂಪಾದನೆ ಮಾಡುತ್ತೇನೆಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮಗೆ ವಾರ್ಷಿಕವಾಗಿ 1 ಲಕ್ಷ ಆದಾಯವಿಲ್ಲ, ನೀವು ಯಾವುದೇ ಎಲೆಕ್ಟ್ರಿಕಲ್ ಕೆಲಸ ಮಾಡುತ್ತಿಲ್ಲ, ನಿಮಗೆ ಸೇರಿದ ಯಾವುದೇ ಜಮೀನು ಇಲ್ಲ, ಪಿರ್ಯಾದಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನಾನು ಎಸ್,ಎಸ್.ಎಲ್.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಪಿರ್ಯಾದನ್ನು ಮತ್ತು ನೋಟಿಸನ್ನು ಓದಿ ಸಹಿ ಮಾಡಿರುತ್ತೀರಿ ಎಂದರೆ ಸರಿ. ಆರೋಪಿ 2-3 ವರ್ಷಗಳಿಂದ ಪರಿಚಯ. ಆರೋಪಿ ಏನು ಕೆಲಸ ಮಾಡುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರೋಪಿಗಲ್ಲದೇ ಬೇರೆ ಇನ್ನು ಎಷ್ಟು ಜನಕ್ಕೆ ಹಣ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇನ್ಯಾರಿಗೂ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಈ ಪ್ರಕರಣವಲ್ಲದೇ ನ್ಯಾಯಾಲಯದಲ್ಲಿ ಇನ್ನೇಷ್ಟು ಪ್ರಕರಣಗಳನ್ನು ದಾಖಲಿಸಿದ್ದೀರಾ ಎಂದರೆ ಸಾಕ್ಷಿ ಯಾವುದು ಇಲ್ಲ ಎಂದು ಹೇಳುತ್ತಾರೆ.

ಆರೋಪಿಗೆ ಹಣವನ್ನು ಯಾವ ರೂಪದಲ್ಲಿ ನೀಡಿದ್ದೀರಿ ಎಂದರೆ ಸಾಕ್ಷಿ 50 ಸಾವಿರ ರೂ.ಗಳನ್ನು ನಗದಾಗಿ ಮತ್ತು 50 ಸಾವಿರ ರೂ. ಗಳನ್ನು ಖಾತೆಯಿಂದ ವರ್ಗಾವಣೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. 50 ಸಾವಿರ ರೂ. ಗಳನ್ನು ಖಾತೆಯಿಂದ

ವರ್ಗಾವಣೆ ಮಾಡಿದ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಕೊಡುತ್ತೇನೆ ಎಂದು ಹೇಳುತ್ತಾರೆ. ನಿಮ್ಮ ಬಳಿ 50 ಸಾವಿರ ರೂ. ನಗದು ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. 50 ಸಾವಿರ ರೂ. ನಗದು ನಿಮ್ಮ ಬಳಿ ಇದ್ದ ಬಗ್ಗೆ ನೋಡಿದವರು ಇದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. 50 ಸಾವಿರ ನಗದನ್ನು ಎಷ್ಟು ಮುಖಬೆಲೆಯ ಎಷ್ಟು ನೋಟುಗಳನ್ನು ಕೊಟ್ಟಿರಿ ಎಂದರೆ ಸಾಕ್ಷಿ 500 ಮುಖಬೆಲೆಯ 50 ನೋಟುಗಳು ಎಂದು ಹೇಳುತ್ತಾರೆ.

ಸಾಮಾನ್ಯವಾಗಿ 20 ಸಾವಿರ ರೂ. ಗಿಂತ ಹೆಚ್ಚಿನ ಹಣವನ್ನು ನಗದು ಮುಖೇನ ಕೊಡಬೇಕಾದರೆ, ಚೆಕ್ ಅಥವಾ ಡಿ.ಡಿ ಮುಖೇನ ಕೊಡಬೇಕೆಂಬ ಕಾನೂನು ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಎಲೆಕ್ಟ್ರಿಕಲ್ ಕೆಲಸ ಮಾಡಲು ಈ ರೀತಿ ಕಾನೂನಿನ ವಿಚಾರ ತಿಳಿದುಕೊಳ್ಳಬೇಕೆಂದರೆ ಸಾಕ್ಷಿ ಆವಾಗ ತಿಳಿದುಕೊಂಡಿರಲಿಲ್ಲ ಎಂದು ಹೇಳುತ್ತಾರೆ.

ಆರೋಪಿಗೆ ಹಣ ನೀಡಿದ ದಿನಾಂಕ, ತಿಂಗಳು, ವರ್ಷ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಬ್ಯಾಂಕ್ ಮುಖೇನ ದಿಃ08-02-2012 ರಂದು 20 ಸಾವಿರ ಹಣ ನೀಡಿರುತ್ತೇನೆ, ದಿಃ 29.02.2012 ರಲ್ಲೇ 30 ಸಾವಿರ ಹಣ, ದಿಃ 22.02.2012 ರಲ್ಲಿ 50 ಸಾವಿರ ಹಣ ನಗದಾಗಿ ನೀಡಿರುತ್ತೇನೆ ಎಂದು ಹೇಳುತ್ತಾರೆ. ಯಾವ ದಿನಾಂಕ, ತಿಂಗಳು, ವರ್ಷದಂದು ಬ್ಯಾಂಕ್ ಮುಖೇನ ಹಾಗೂ ನಗದಾಗಿ ಹಣ ನೀಡಿದೆ ಎಂದು ನಿಮ್ಮ ಪಿರ್ಯಾದಿನಲ್ಲಾಗಲೀ, ನೋಟೀಸನಲ್ಲಾಗಲೀ ನಮೂದಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಆರೋಪಿ ಯಾವ ಉದ್ದೇಶಕ್ಕಾಗಿ ಹಣ ಬೇಕೆಂದು ನಿಮ್ಮ ಬಳಿ ಕೇಳಿದ್ದರು ಎಂದರೆ ಸಾಕ್ಷಿ ಮನೆಯಲ್ಲಿ ತೊಂದರೆ ಇದೆ ಎಂದು ಕೇಳಿ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ಆರೋಪಿ ಅವರ ಮನೆಯಲ್ಲಿ ತೊಂದರೆ ಇದೆ ಎಂದು ಕೇಳಿ ಹಣ ಪಡೆದರು ಎಂದು ನಿಮ್ಮ ಪಿರ್ಯಾದಿನಲ್ಲಾಗಲೀ, ನೋಟೀಸನಲ್ಲಾಗಲೀ ನಮೂದಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಆರೋಪಿ ಅವರ ಮನೆಯಲ್ಲಿ ತೊಂದರೆ ಇದೆ ಎಂದು ಹಣ ಕೇಳಿ ಪಡೆದರು ಎಂದು ನಿಮ್ಮ ಪಿರ್ಯಾದಿನಲ್ಲಾಗಲೀ, ನೋಟೀಸನಲ್ಲಾಗಲೀ ನಮೂದಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ಆರೋಪಿ ಹಣ ಕೊಟ್ಟ ದಿನಾಂಕದಿಂದ ಎಷ್ಟು ದಿನಗಳ ಮುಂಚಿತವಾಗಿ ನಿಮ್ಮ ಬಳಿ ಹಣ ಕೇಳಿದರು ಎಂದರೆ ಸಾಕ್ಷಿ 6 ತಿಂಗಳ ಮುಂಚೆ ಎಂದು ಹೇಳುತ್ತಾರೆ. ನೀವು ಆರೋಪಿಗೆ ಹಣ ಕೊಡುವ ಕಾಲಕ್ಕೆ ಯಾರ್ಯಾರು ಹಾಜರಿದ್ದರು ಎಂದರೆ ಸಾಕ್ಷಿ ಯಾರೂ ಇಲ್ಲ ಎಂದು ಹೇಳುತ್ತಾರೆ. ಹಣ ಕೇಳಲು ಆರೋಪಿ ಒಬ್ಬರೇ ಬಂದಿರುತ್ತಾರೆ. ಆರೋಪಿ ಹಣ ಪಡೆದ ಎಷ್ಟು ದಿನಗಳ ನಂತರ ಚೆಕ್ ಕೊಟ್ಟರು ಎಂದರೆ ಸಾಕ್ಷಿ ಒಂದು ವಾರಗಳ ನಂತರ ಎಂದು ಹೇಳುತ್ತಾರೆ. ಆರೋಪಿ ಚೆಕ್ ನ್ನು ತಿರುವಳಿಗೆ ಕೊಟ್ಟಿಲ್ಲ, ಹಣದ ಭದ್ರತೆಗಾಗಿ ಕೊಟ್ಟಿದ್ದರಾ ಎಂದರೆ ಸಾಕ್ಷಿ ಹಣ ಯಾವುದೋ ಬರುವುದು ಇದೆ, ಬಂದ ನಂತರ ನಗದೀಕರಣಕ್ಕೆ ಹಾಕಿಕೊಳ್ಳಿ ಎಂದು ಕೊಟ್ಟಿದ್ದರು ಎಂದು ಹೇಳುತ್ತಾರೆ. ನಿಮ್ಮ ಪೂರ್ಣ ಹೆಸರೇನು ಎಂದರೆ ಸಾಕ್ಷಿ ಆರ್.ಜಿ. ನಂದನ್ ಕುಮಾರ ಎಂದು ಹೇಳುತ್ತಾರೆ. ನಿಮ್ಮ ಹೆಸರು ಆರ್.ಜಿ. ನಂದನ್ ಕುಮಾರ ಎಂದು ನಿರೂಪಿಸಲು ನ್ಯಾಯಾಲಯಕ್ಕೆ ದಾಖಲಾತಿ ಕೊಡುತ್ತೀರಾ ಎಂದರೆ ಸಾಕ್ಷಿ ಕೊಡುತ್ತೇನೆ ಎಂದು ಹೇಳುತ್ತಾರೆ.

( ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಅನುಮತಿಸಲಾಯಿತು.)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು